2 ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಕ್ರ ಸಂ	ವಿವರ	ಮಂಜೂರಾತಿ ಸಂಖ್ಯೆ
1	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಸಿಂಧಗಿ	50
2	ಡಿ ಟಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ, ಸಿಂಧಗಿ	50
3	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಸುಂಗರಾಣ	50
4	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಯಂಕಂಚಿ	50
5	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಗುಬ್ಬೇವಾಡ	50
6	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಗೊಲಗೇರಿ	50
7	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ದೇವರಹಿಪ್ಪರಗಿ	50
8	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಜಿಂಜಲಭಾವಿ	50
9	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಜಾಲವಾದಿ	50
10	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಸಿಂಧಗಿ	50

1057 (1187) ಶ್ರೀ ಅಶೋಕ್ ಗುರಪ್ಪ ಶಾಬಾದಿ (ಸಿಂಧಗಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಸಿಂಧಗಿ ತಾಲ್ಲೂಕಿನ ಚಾಂದ್ ಕೋಟೆ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಈ ಕಟ್ಟಡ ಕುಸಿಯಲು ಕಾರಣಗಳೇನು,

ಇ) ಹಾಗಿದ್ದಲ್ಲಿ ಸರ್ಕಾರ ಹೊಸ ಕಟ್ಟಡ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳುವುದೇ (ವಿವರ ನೀಡುವುದು),

ಈ) ಹೊಸ ಕಟ್ಟಡ ನಿರ್ಮಾಣ ಅಸಾಧ್ಯವಾದಲ್ಲಿ, ಬದಲಿ ವ್ಯವಸ್ಥೆಯನ್ನು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್ ಅಶೋಕ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿದೆ

ಆ) ಕಪ್ಪು ಮಣ್ಣಿನಲ್ಲಿ ಕಟ್ಟಿರುವುದರಿಂದ ಕುಸಿದು ಹೋಗಿರುತ್ತದೆ

ಇ) ಹೊಸ ಕಟ್ಟಡ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದು ಮುಂಬರುವ ಕೆ ಎಚ್ ಎಸ್ ಡಿ ಆರ್ ಪಿ ಯೋಜನೆಯಲ್ಲಿ ಕೈಗೊಳ್ಳಲಾಗುವುದು

ಈ) ಸದ್ಯ ವೈದ್ಯರ ವಸತಿ ಗೃಹವೊಂದರಲ್ಲಿ ಆಸ್ಪತ್ರೆಯನ್ನು ನಡೆಸಲಾಗುತ್ತಿದೆ ಹೊಸ ಕಟ್ಟಡ ಕಟ್ಟಿ ನಂತರ ಅಲ್ಲಿಗೆ ಸ್ಥಳಾಂತರಿಸಲಾಗುವುದು

1058 (1188) ಶ್ರೀ ಅಶೋಕ್ ಗುರಪ್ಪ ಶಾಬಾದಿ (ಸಿಂಧಗಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಸಿಂಧಗಿ ತಾಲ್ಲೂಕಿನ ಕಲಕೇರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡದ ಕಾಮಗಾರಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಈ ಕಟ್ಟಡ ಕಾಮಗಾರಿ ಪ್ರಾರಂಭವಾಗಿದ್ದು ಯಾವಾಗ ಹಾಗೂ ಇದರ ಅಂದಾಜು ವೆಚ್ಚ ಎಷ್ಟು,

ಇ) ಈ ಕಾಮಗಾರಿ ವಿಳಂಬವಾಗಲು ಕಾರಣಗಳೇನು,

ಈ) ಹಾಗಿದ್ದಲ್ಲಿ ಈ ಕಾಮಗಾರಿ ಮುಕ್ತಾಯಗೊಳ್ಳುವುದು ಯಾವಾಗ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿದೆ